ಮಾಹಿತಿ ಹಕ್ಕು ವಿಧೇಯಕ ಜಾರಿ.

2352(2888) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಾಹಿತಿ ಹಕ್ಕು ವಿಧೇಯಕವನ್ನು ಕರ್ನಾಟಕದಲ್ಲಿ ಎಂದಿನಿಂದ ಜಾರಿಗೊಳಿಸಲಾಗಿದೆ;

ಆ) ಈ ವಿಧೇಯಕದ ಅವಧಿಯಲ್ಲಿ ನ್ಯಾಯಾಂಗ ತನಿಖೆ ವರದಿಗಳು ಹಾಗೂ ಸಿ.ಓ.ಡಿ. ತನಿಖೆ ವರದಿಯನ್ನು ಪಡೆಯಲು ಅವಕಾಶವಿದೆಯೇ;

ಇ) ಮಾಹಿತಿ ಹಕ್ಕು ಚಲಾಯಿಸಲು ನಾಗರೀಕರು ಇಲಾಖೆಯ ಯಾವ ಅಧಿಕಾರಿಯನ್ನು ಸಂಪರ್ಕಿಸಬೇಕೆಂಬ ಬಗ್ಗೆ ನಿರ್ದಿಷ್ಟ ಅಧಿಕಾರಿಯನ್ನು ಗುರ್ತಿಸಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ನಿರ್ದಿಷ್ಟ ಅಧಿಕಾರಿಗಳನ್ನು ಗುರ್ತಿಸಿ, ಎಂದು ನೇಮಿಸಲಾಗುವುದು.

ಶ್ರೀ ಬಿ.ಕೆ. ಚಂದ್ರಶೇಖರ್ (ವಾರ್ತಾ ಸಚಿವರು) :—

ಅ) ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2000ನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 13-12-2000ರಂದು ಪ್ರಕಟಗೊಂಡಿರುತ್ತದೆ. ಆದರೆ ಇದಕ್ಕೆ ಸಂಬಂಧಪಟ್ಟ ನಿಯಮಗಳು ಇನ್ನೂ ರಚಿತವಾಗಿಲ್ಲವಾದುದರಿಂದ ಅಧಿನಿಯಮವನ್ನು ಜಾರಿಗೊಳಿಸಲಾಗಿಲ್ಲ.

ಆ) ಅಧಿನಿಯಮದಲ್ಲಿ ಹೇಳಲಾದ ಅಪವಾದಗಳಿಗೆ ಒಳಪಟ್ಟು ಪ್ರತಿ ನಾಗರೀಕರಿಗೂ ಅವನಿಗೆ ಬೇಕಾದ ಎಲ್ಲಾ ಮಾಹಿತಿಯನ್ನು ಪಡೆಯಲು ಹಕ್ಕುಳ್ಳವನಾಗಿರುತ್ತಾನೆ.

ಇ) ಹೌದು.

ಈ) ಮಾಹಿತಿಯನ್ನು ಪಡೆಯಲು ಸಾರ್ವಜನಿಕರು ಸಂಪರ್ಕಿಸಬೇಕಾದ ನಿರ್ದಿಷ್ಟ ಅಧಿಕಾರಿಗಳನ್ನು ಗುರುತಿಸುವ ಪ್ರಕ್ರಿಯೆಯು ಜಾರಿಯಲ್ಲಿದೆ. ಈ ಪ್ರಕ್ರಿಯೆಯನ್ನು ಆದಷ್ಟು ಬೇಗ ಪೂರ್ತಿಗೊಳಿಸಲಾಗುವುದು.